51st Year of Publication ★ SATYAVADI Daily, MYSORE 4

Reg No B G 155 27-5-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯನ್ನೆಚ್ಚಿ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

ಸ್ಥಾಪಕರು : ತೀರ್ಥಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

A STRAIGHT DEAL
If you want a Straight Deal
Then go Straight to
BANK ROAD BAHUSAR.
The Shop with one Price,
a Fair Price, and a really
Favourable Price.
No worry. No Higgle-haggling.

ಕೇಂದ್ರದ ಶಾಲೆಗಳಲ್ಲಿ ಹಿಂದಿ ಮಾಧ್ಯಮ

ಮೈಸೂರಿನ ಅಶೋಕಾ ಟಾಕೀಸ್ ಬಳಿ ಹೊಸದಾಗಿರುವ ತಮ್ಮ ಸ್ವಂತ ಭವ್ಯ
ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರ ವರೆಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರದನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಚಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತಮಯವಾದ ಇಂದ್ರಜಾಲಾಟ
ನಶೆಯುನ ಮಾತನಾಡುವ ಬೊಂಬೆ, ಎಲೆಕ್ಟ್ರಿಕ್ ಕುರ್ಚಿ. ಪ್ರವೇಶದರ 25 ಪೈಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವನ್ನು ಕ್ಷಿಪ್ರದಲ್ಲೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇದು.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅದರ ಹಿತೈಷಿಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆತಿಸಿ, ಕೃತಜ್ಞತಾಪೂರ್ವಕ ವಂದಿಸುತ್ತೇವೆ.

ಸಂಪಾದಕ ಮತ್ತು 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಸಿಂಕರಣೆ

ಲಕ್ನೋದಿಂದ ಬಂದಿರುವ ವಾರ್ತೆಯ ಪ್ರಕಾರ, ರಿಷಿಕೇಷದ ಹತ್ತಿರ ಮಹರ್ಷಿ ಮಹೇಷ ಯೋಗಿಗೆ ವಿಮಾನ ನಿಲ್ದಾಣ ಕ್ಕಾಗಿ ಜಮೀನು ಕೊಟ್ಟಿರುವರೆಂಬ ಎಸ್.ಎಸ್.ಪಿ ಆರೋಪವನ್ನು ಉತ್ತರ ಪ್ರದೇಶ ಸರ್ಕಾರ ನಿರಾಕರಿಸಿದೆ.

★ ಕೊಯ್ನದಲ್ಲಿ ಭೂಕಂಪ ಹೆಚ್ಚುವರಿಯಾಗಿ ಆಗಿರುವುದಾಗಿ ವರದಿಯಾಗಿದೆ.

ಮೂವರ ಬಂಧನ

ಪ್ರಧಾನಿ ಇಂದಿರಾಗಾಂಧಿಯವರ ಹಿರಿಯರ ಸ್ವತ್ತಾದ ಅಲಹಾಬಾದಿನ ಆನಂದ ಭವನಕ್ಕೆ ನುಗ್ಗಲೆತ್ನಿಸಿದ ಸಮಾಜವಾದಿ ಯುವಕ ಸಭೆಯ ಮೂವರು ಸದಸ್ಯರನ್ನು ಬಂಧಿಸಿದೆ. ವಸತಿ ಆಭಾವ ಇರುವ ಅಲಹಾಬಾದಿನಲ್ಲಿ ಖಾಲಿಇರುವ ಆನಂದಭವನವನ್ನು ಯುವಕ ವಿದ್ಯಾರ್ಥಿ ನಿಲಯವನ್ನು ಮಾಡುವುದಾಗಿ ಸಭೆ ಬೆದರಿಕೆ ಹಾಕಿತ್ತು.

★

ಮಾಜಿ ಮಂತ್ರಿಯ ನಿಧನ

ಶ್ರೀ ಬಿ. ಡಿ. ಜತ್ತಿಯವರೆ ಮಂತ್ರಿಮಂಡಲದಲ್ಲಿ ಸಹಕಾರ ಮಂತ್ರಿಗಳಾಗಿದ್ದ ಶ್ರೀ ಮಾಲಿ ಮರಿಯಪ್ಪನವರು ಬೆಂಗಳೂರು ಬೌರಿಂಗ್ ಆಸ್ಪತ್ರೆಯಲ್ಲಿ ಮೊನ್ನೆ ಸಂಜೆ ತಮ್ಮ 56 ನೇ ವಯಸ್ಸಿನಲ್ಲಿ ಹೃದಯಾಘಾತದಿಂದ ಮರಣಹೊಂದಿದರು.

★

ರೈಲಿನಲ್ಲಿ ಲೂಟಿ

ಬಂದೂಕ ಹಿಡಿದಿದ್ದ ಕಳ್ಳರು ಬೆರಿಯು ಲ್ಲಿ ಮತ್ತು ಆಗ್ರ ರೈಲಿನ ಎರಡನೆಯ ತರಗತಿ ಗಾಡಿಗೆ ನುಗ್ಗಿ ಅಲ್ಲಿದ್ದವರನ್ನು ಹೆದರಿಸಿ ಆಭರಣ ವಸ್ತುಗಳನ್ನು ಕಸಿದುಕೊಂಡು ಕೆಲವರಿಗೆ ಗಾಯಪಡಿಸಿ ಪರಾರಿಯಾದರು. ಸಂಶಯದ ಮೇಲೆ ಬಾರ್ಡರ್ ಪೋಲೀಸ್ ಠಾಣೆಯಲ್ಲಿ ಇಬ್ಬರ ಬಂಧನವಾಗಿದೆ.

ಬಂಧನ

ಮೈಸೂರು— ಇಂದು ವಿಭಾಗಾಧಿಕಾರಿಗಳ ಕಚೇರಿ ಮುಂದೆ ಪಿಕೆಟ್ ಮಾಡಲು ಪ್ರಯತ್ನಿಸಿದ ಎಸ್ಸೆಸ್ಪಿ ತಂಡದ 57 ಮಂದಿ ಬಂಧಿಸಲ್ಪಟ್ಟರು.

★

ಕನ್ನಡ ಚಳುವಳಿ

ಮುಂದಿನ ತಿಂಗಳು ಕನ್ನಡ ಭಾಷಾ ಚಳುವಳಿಯನ್ನು ಮಂಡ್ಯದ ಜಿಲ್ಲಾಧಿಕಾರಿಯವರ ಕಚೇರಿ ಎದುರು ಹೂಡುವುದಾಗಿ ಬೆಂಗಳೂರಿನಲ್ಲಿ ನಿನ್ನೆ ವಿಧಾನ ಸಭೆ ಸದಸ್ಯ ಶ್ರೀ ವಾಟಾಳ್ ನಾಗರಾಜ್ ತಿಳಿಸಿದರು.

★

ಕೊದಲಿಗೆ ಗಿರಾಕಿ

ಕೊರಿಯಾದಲ್ಲಿನ ಜೌರಿ ತಯಾರಿಸುವ ಸಂಸ್ಥೆ ಭಾರತದ ಮಾನವ ಕೂದಲು ಕೊಳ್ಳಲು ಮುಂದಾಗಿರುವದೆಂದು ಮದ್ರಾಸಿನ ವಾರ್ತೆ ತಿಳಿಸುತ್ತದೆ.

★

ಪ್ರಧಾನರ ಹೇಳಿಕೆ

ಇನ್ನು ಮೂರೂವರೆ ವರ್ಷಗಳಲ್ಲಿ ವಿದೇಶಿ ಆಹಾರ ನೆರವನ್ನು ಭಾರತ ತ್ಯಜಿಸುವುದಾಗಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಮೊನ್ನೆ ರಾತ್ರಿ ಸಿಡ್ನಿಯಲ್ಲಿ ತಿಳಿಸಿದರು.

★ ಶ್ರೀ ದ್ವಾರಕಾ ಜಗದ್ಗುರುಗಳು ಬೆಂಗಳೂರಿನಲ್ಲಿ ಇಂಡಾಲಜಿ ವ್ಯಾಸಂಗವನ್ನು ಆರಂಭಿಸುತ್ತಾ, ಭಾರತ ಸಂಸ್ಕೃತಿ ದೃಷ್ಟಿಯಲ್ಲಿ ವಿಶ್ವದ್ವಾಗಿದೆಯೆಂದು, ಅದರ ಮತ ವಿಶ್ವಜನತೆಯ ಹಿತಕ್ಕಾಗಿದೆ ಎಂದು ತಿಳಿಸಿದರು.

● ವಾಷಿಂಗ್ಟನ್ನಿನ ಹಾರ್ವರ್ಡ್ ವಿಶ್ವವಿದ್ಯಾನಿಲಯಕ್ಕೆ ಗಾಂಧೀಜಿ ಪ್ರತಿಮೆ ಮತ್ತಿತರ ಬಹುಮಾನಗಳನ್ನು ಬೊಂಬಾಯಿನ ಒಂದು ಸಮಾಜ ಸಾಂಸ್ಕೃತಿಕ ಸಂಸ್ಥೆ ಇತ್ತಿದೆ.

● ಮಹರ್ಷಿ ಮಹೇಷ ಯೋಗಿಯೆನ್ನೊತ್ತ ಸಂಗಡ ಉಪಾಧ್ಯಕ್ಷ ಚುನಾವಣೆಗೆ ತೆಗೆದುಕೊಳ್ಳಲು ಅಮೆರಿಕಾದ ರಾಬರ್ಟ್ ಕೆನಡಿ ತಿಳಿಸಿದ್ದಾರೆ.

ಹಿಂದಿ ಮಾಧ್ಯಮ

ಹೈದರಾಬಾದು— ಕೇಂದ್ರಶಾಲೆಗಳಲ್ಲಿ ಹಿಂದಿ ಮಾಧ್ಯಮವಿರುವಂತೆ ಕೇಂದ್ರ ಮಾಡಿರುವ ನಿರ್ಧಾರವನ್ನು ಟೀಕಿಸಲಾಗಿದೆ.

★

ಹೊಸ ಮುಖ್ಯ ಮಂತ್ರಿಗಳ ನುಡಿ

ನವದೆಹಲಿ— ಮುಖ್ಯ ಮಂತ್ರಿಯಾಗಿ ಆಗಿ ಆಯ್ಕೆಯಾಗಿರುವ ಶ್ರೀ ವೀರೇಂದ್ರ ಪಾಟೀಲರು ತಾವು ಮುಂದಿನ ತಿಂಗಳು ಭಾರತ ಗೃಹಮಂತ್ರಿ ಜವರೊಡನೆ ಮಹಾಜನ ಕಮಿಷನ್ ನಿರ್ಧಾರವನ್ನು ಜಾರಿಗೆ ತರುವ ವಿಷಯ ಮಾತಾಡುವುದಾಗಿ ಪತ್ರಿಕೆಯವರಿಗೆ ತಿಳಿಸಿದರು – ತಮ್ಮ ಮಂತ್ರಿ ಮಂಡಲ ಹೇಗಿರುವುದೆಂಬುದನ್ನೂ ಎಷ್ಟು ಮಂದಿ ಹೊಸಬರಿರುವರೆಂಬುದನ್ನೂ ತಿಳಿಸಲಿಲ್ಲ – ಬೆಂಗಳೂರಿನಲ್ಲಿ ಪಾರ್ಲಿಮೆಂಟು ಅಧಿವೇಶನ ನಡೆಯುವ ಬಗ್ಗೆ ತಾವು ಎಲ್ಲ ರೀತಿ ಅನುಕೂಲಿಸಲು ಸಿದ್ಧವೆಂದೂ ಹೇಳಿದರು.

★

ಹೇಗಿದೆ ಈ ಸಾಹಸ

ಅಲಸ್ಕೆ— ಇಲ್ಲಿಯ ನೂರು ಮಂದಿ ವಯಾಲಾರ್ ಪಂಚಾಯಿತಿಯಲ್ಲಿರುವ 50 ಎಕ್ರೆ ಸರ್ಕಾರಿ ಸಾಳುಭೂಮಿಯನ್ನು ತಂತಮ್ಮಲ್ಲೇ ಅರ್ಧಾರ್ಧ ಎಕರೆಯಂತೆ ಹಂಚಿಕೊಂಡು ಸುತ್ತ ಕಂಭಗಳನ್ನು ನೆಟ್ಟು ಕ್ಕೊಂಡರು – ಆ ಭೂಮಿಯನ್ನು ತಮ್ಮ ಹೆಸರಿಗೆ ರಿಜಿಸ್ಟರು ಮಾಡಿಕೊಳ್ಳುವಂತೆ ರೆವಿನ್ಯೂ ಅಧಿಕಾರಿಗಳಿಗೆ ಅರ್ಜಿಕೊಟ್ಟರು.

★

ಡಾ॥ ಮೋದಿ ನೇತ್ರ ಶಿಬಿರ

ಕೋಲಾರ— ಇಲ್ಲಿ ಡಾ॥ ಮೋದಿಯವರೆ ನೇತ್ರ ಶಿಬಿರವನ್ನು ಜೂ 11 ರಂದು ನಡೆಸಲು ನಿರ್ಧರಿಸಲಾಗಿದೆ.

★

ಹೆಂಡ ಕುಡಿದು ಸತ್ತರು

ಡಿಯೂ ಪ್ರದೇಶ ಗ್ರಾಮ ಒಂದರಲ್ಲಿ ಹೆಂಡ ಕುಡಿದು ಮೂವರು ಸತ್ತರು.

ಕಲ್ಲು ತುಂಬಿದ ರೇಷನ್ ಅಕ್ಕಿ

ಹೂಗ್ಲಿಯಲ್ಲಿಯ ಒಂದು ಸಂಸಾರದವರು ತಮಗೆ ದೊರೆತ ರೇಷನ್ ಅಕ್ಕಿಯಲ್ಲಿದ್ದ ಕಲ್ಲುಗಳನ್ನು ತಮ್ಮ ಮನೆಯ ಒಂದು ಮೂಲೆಯಲ್ಲಿ ಸೇರಿಸಿದ್ದಾರೆ. ಅದು ಈಗ ಒಂದು ಕಿಂಟಾಲಿನಷ್ಟಾಗಿದೆ. ಆ ಕಲ್ಲುಗಳು ವಿವಿಧ ಅಳತೆ ಮತ್ತು ಬಣ್ಣಗಳದ್ದಾಗಿವೆ. ಈ ಸಂಸಾರವು 35 ದೊಡ್ಡವರ ಮತ್ತು 10 ಮಕ್ಕಳ ಕಾರ್ಡ್ ಹೊಂದಿವೆ. ಈ ಕಲ್ಲು ರಾಶಿ ಸೇರಿಸಲು ಸುಮಾರು 2 ವರ್ಷ ಹಿಡಿಯಿತು.

★

ವಿಚಿತ್ರ ನ್ಯಾಯ

ಏಪ್ರಿಲ್ ಕಡೆಯಲ್ಲಿ ಬ್ರಾಟಿಸ್ಲಾವಾದಿಂದ ಬಂದಿರುವ ವಾರ್ತೆ. 1950 ರಲ್ಲಿ ಮೂರು ಮಂದಿ ಸ್ಲೋವಾಕ್ ಕಮ್ಯೂನಿಸ್ಟರಿಗೆ ಮರಣದಂಡನೆ ವಿಧಿಸಲ್ಪಟ್ಟು, ಗಲ್ಲಿಗೇರಿಸಲ್ಪಟ್ಟಿದ್ದರು. ಈಜೆಗೆ ಇವರ ವಿಷಯದಲ್ಲಿ, ಮರಣಾನಂತರದ, ಪುನರ್ವಿಚಾರಣೆಯಲ್ಲಿ ಇವರು ನಿರಪರಾಧಿಗಳೆಂದು ಬಿಡುಗಡೆ ಮಾಡಲ್ಪಟ್ಟರು !

ಹೀಗಿದೆ ಕಮ್ಯುನಿಸ್ಟರ ರಾಜಕೀಯ, ಕಮ್ಯೂನಿಸ್ಟರ ನ್ಯಾಯ, ಕಮ್ಯೂನಿಸ್ಟರ ಕುತಂತ್ರ. ಅವರು ನ್ಯಾಯವೆಂದರೆ, ಅದು ನ್ಯಾಯ, ಅವರು ಅನ್ಯಾಯ, ಸತ್ಯವಾಗಲೀ ನೀತಿಯಾಗಲೀ ಇಲ್ಲ.

ಅಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ಸಗಟ್ಟಾಗಿ ದೊರೆಯುತ್ತವೆ

ಗೋವಧೆ ಕೂಡಲೆ ನಿಷೇಧವಾಗಲಿ

Cow Slaughter should be banned Immediately

SHAKTI

SUDHA

A Superb Tonic

Protect the Cow

ಗೋರಕ್ಷಣೆ ಮಾಡಿ, ಹಾಲಿನಿಂದಲೂ ಉಪಯೋಗಿಸಿ ಹೆಚ್ಚು ಆದಾಯ ಪಡೆಯಿರಿ

ಶ್ರೀಮದ್ಭಗವದ್ಗೀತೆ ಮಾಡಿಸಿರುವ ಉಪದೇಶವನ್ನು ಪಾಲಿಸಿರಿ

ಮುಂದಿನ ಪೀಳಿಗೆಯವರು ಉಣ್ಣಲು ಉಣ್ಣುವ ಅನ್ನಕ್ಕೆ ಕೃಷಿಯಾಗಿದೆ

ಇನ್ನಾದರೂ ನಮ್ಮ ಗೋರಕ್ಷಣೆ ಹಾಗೂ ಗೋವೃದ್ಧಿ, ಕೆಲಸಕ್ಕಾಗಿ, ಹಾಲುಕೊಡುವ ಎತ್ತು ಕೃಷಿಗಾಗಿ ಎತ್ತಿನ ಕೃಷಿಗಾಗಿ ಮಾಡಿರಿ ; ಬೆಲೆ ಕೇವಲ 50 ಪೈಸೆ

Quality Printing — Neat Binding

Lakshminarasimha Press

Swaroopa, Mysore

ವುಡ್‌ಲಾಂಡ್ಸ್ ಜನವರಿಯ 4 ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್ ಹುಸೇನ್
ಅಚ್ಚಲ ಸಹದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

ಡಿಸೆಂಬರ್ 3ನೇ ವಾರ

ಆಪೆರ—

.... ಅಪೂರ್ವ ಕನ್ನಡ ಚಿತ್ರ ....

ಬೆಂಗಳೂರು ಮೇಲ್

ಪಾತ್ರ : ರಾಜಕುಮಾರ್ ನರಸಿಂಹರಾಜು ಕೊಟ್ಟಾರಕರ್
ಆಶ್ವಥ್ ಜಯಂತಿ ವಿಜಯಲಲಿತ

Help The Gorakshana

ಗೋರಕ್ಷಣೆಗೆ ಜೇಂಬಲ ನೀಡಿ

— ಗೋರಕ್ಷಣೆ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಣಿಯಿದೆ ಕಳೆದಿರುವವರು ಇವಂಗೆ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ್ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅಸಂತಸಂಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಕಸಭಾ, ಹೊಂಗನೂರ
ಗೋರಕ್ಷಣ ಆಫೀಸು ಪಕ್ಕಪಾದಿ ಪೈಸ್ ಚಾಮರಂತಿಪುರಂ ಮೈಸೂರು 4
ವಿಳಾಸ— ಗೋರಕ್ಷಣ ಆಫೀಸು 1067 ಚಾಮರಂತಿಪುರಂ, ಮೈಸೂರು

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachare Nirata M S Krishna Rao (Proprietor) at the Satyavadi Press Chamarajapuram, Mysore 4